ಅನುಬಂಧ - I

ಕ್ರಮ ಸಂಖ್ಯೆ	ವಿಧೇಯಕ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2001	31-07-2001	ರಾಜ್ಯಪಾಲರು
2.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ ವಿಧೇಯಕ, 2002	30-03-2002	ರಾಜ್ಯಪಾಲರು
3.	ಕರ್ನಾಟಕ ಧನವಿನಿಯೋಗ ವಿಧೇಯಕ 2002	30-03-2002	ರಾಜ್ಯಪಾಲರು
4.	ಕರ್ನಾಟಕ ಧನವಿನಿಯೋಗ (ಲೇಖನು ದಾನ) ವಿಧೇಯಕ, 2002	30-03-2002	ರಾಜ್ಯಪಾಲರು
5.	ಕರ್ನಾಟಕ ಸ್ಟಾಂಪ್ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕ, 2002	30-03-2002	ರಾಜ್ಯಪಾಲರು

4) ವರದಿಗಳನ್ನೊಪ್ಪಿಸುವುದು

ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ನಾನು ಕೃಷಿ ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖಾ ವಿಷಯ ಸಮಿತಿಯ 2002-03 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷರೆ, ನಾನು ಇಂಧನ ಇಲಾಖಾ ವಿಷಯ ಸಮಿತಿಯ 2002-03ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಹಣಕಾಸು, ಸಾಂಖ್ಯಿಕ ಹಣಕಾಸು, ಸಾಂಖ್ಯಿಕ ಮತ್ತು ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಇಲಾಖಾ ವಿಷಯ ಸಮಿತಿಯ 2002-03ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಡಿ.ಸಿ. ತಮ್ಮಣ್ಣ (ಕಿರುಗಾವಲು): ಮಾನ್ಯ ಅಧ್ಯಕ್ಷರೆ, ನಾನು ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ವಿಷಯ ಸಮಿತಿಯ 2002-03ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

12.30 ಪಿ.ಎಂ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ನಾನು ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಡಾ|| ಜೆ.ಡಿ. ನಾರಾಯಣಪ್ಪ (ಹೊಸನಗರ): ಮಾನ್ಯ ಅಧ್ಯಕ್ಷರೆ, ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಅಧ್ಯಕ್ಷರೆ, ನಾನು ಸಹಕಾರ ಇಲಾಖಾ ವಿಷಯ ಸಮಿತಿಯ 2002-2003 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಡಿ. ಆರ್. ಪಾಟೀಲ್ (ಗದಗ): ಮಾನ್ಯ ಅಧ್ಯಕ್ಷರೆ, ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು): ಮಾನ್ಯ ಅಧ್ಯಕ್ಷರೆ, ನಾನು ಜಲಸಂಪನ್ಮೂಲಗಳು ಹಾಗೂ ಲೋಕೋಪಯೋಗಿ ಇಲಾಖಾ ವಿಷಯ ಸಮಿತಿಯು 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎ.ಬಿ. ಪಾಟೀಲ್(ಸಂಕೇಶ್ವರ): ಮಾನ್ಯ ಅಧ್ಯಕ್ಷರೆ, ನಾನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ನಾನು ಒಳಾಡಳಿತ, ಸಾರಿಗೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಂ. ಚಂದ್ರಪ್ಪ (ಭರಮಸಾಗರ): ಮಾನ್ಯ ಅಧ್ಯಕ್ಷರೆ, ನಾನು ಆಹಾರ, ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ನಾನು ಶಿಕ್ಷಣ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು (ಏ.ಸ.): ಕಂದಾಯ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೆ, ನಾನು ಸಮಾಜ ಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ವಿಷಯ ಸಮಿತಿಯ 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಕ್ರಿಕೆಟ್ ಆಟಗಾರ ಶ್ರೀ ಜಾವಗಲ್ ಶ್ರೀನಾಥ್ ಅವರಿಗೆ ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಅವಮಾನ ಮಾಡಿರುವುದು.

ಶ್ರೀ ಎ.ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೆ, ಜುಲೈ 6ನೇ ತಾರೀಖು ಶನಿವಾರ ಈ ದೇಶದ ಖ್ಯಾತಿವೆತ್ತ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್ ಅವರು ಮೈಸೂರಿಗೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಅವರ ವಾಹನದ ಆರ್.ಸಿ.ಬುಕ್‌ನ್ನು ಕಳೆದುಕೊಂಡಿದ್ದರು. ಸಂಜೆ 7-30 ಗಂಟೆಗೆ ಮೈಸೂರು ನಗರದಲ್ಲಿರುವ ಕುವೆಂಪು ನಗರ ಪೊಲೀಸ್ ಠಾಣೆಗೆ ದೂರನ್ನು ದಾಖಲೆ ಮಾಡಲಿಕ್ಕೋಸ್ಕರವಾಗಿ ಬಂದರು. ಹಾಗೆ ಬಂದಂಥ ಸಂದರ್ಭದಲ್ಲಿ ಅಲ್ಲಿಯ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿರುವಂಥ ರಾಜೇಂದ್ರ ಪ್ರಸಾದ್ ಅವರು ಶ್ರೀನಾಥ್ ಅವರನ್ನು ಕುಳಿತುಕೊಳ್ಳಿ ಎಂದು ಜೇರ್‌ನ್ನು ಕೊಡುವಂಥ ಸೌಜನ್ಯವನ್ನು ಸಹ ತೋರಿಸಿಲ್ಲ. ನಂತರ ತಮ್ಮ ದೂರನ್ನು ಲಿಖಿತ ಮೂಲಕ ಕೊಟ್ಟು, ದೂರನ್ನು ದಾಖಲೆ ಮಾಡಿಕೊಳ್ಳಿ ಎಂದು ಮನವಿಯನ್ನು ಮಾಡುವಂಥ ಸಂದರ್ಭದಲ್ಲಿ ಆ ರಾಜೇಂದ್ರ ಪ್ರಸಾದ್‌ರವರು, ದೂರನ್ನು ದಾಖಲೆ ಮಾಡಿಕೊಳ್ಳಬೇಕಾದರೆ 'ನೀನು' ಎನ್ನುವಂಥ ಪದವನ್ನು ಉಪಯೋಗಿಸಿ ಹೋಗಿ ನೋಟರಿ ಹತ್ತಿರ ಅಫಿಡೆವಿಟ್ ಮಾಡಿಸಿಕೊಂಡು ಒಂದು ಆಮೇಲೆ ಕೇಸನ್ನು ಕೊಡಬೇಕೆನ್ನುವಂಥ ವಿಚಾರವನ್ನು ಹೇಳಿದಾಗ, ತಮ್ಮ ಪರಿಚಯವನ್ನು ಶ್ರೀನಾಥ್‌ರವರು ಹೇಳಲಿಕ್ಕೆ ಹೋದರೆ, ನೀನು ಯಾರಾದರೂ ನನಗೇನು? ಮೊದಲು ಹೋಗಿ ಅಫಿಡೆವಿಟ್‌ನ್ನು ಮಾಡಿಸಿಕೊಂಡು ಬಾ ಎನ್ನುವಂತೆ ಅವಾಚ್ಯವಾಗಿ, ಉದ್ದಟತನದಿಂದ ನಡೆದುಕೊಂಡರು. ಆ ಸಂದರ್ಭದಲ್ಲಿ ಅವರಿಗೆ ಮನಸ್ಸು ನೊಂದು ಅವರು ಠಾಣೆಯಿಂದ ಹೊರಗೆ ಹೋಗುತ್ತಿದ್ದರು. ಆಗ ಸಬ್‌ಇನ್ಸ್‌ಪೆಕ್ಟರ್ ಮಲ್ಲೇಶಯ್ಯ ತಕ್ಷಣದಲ್ಲಿಯೇ ಬಂದು ಅವರಿಗೆ ಮನವಿ ಮಾಡಿ, ಅವರೇ ಕ್ಷಮೆಯನ್ನು ಕೇಳಿ ಒಳಗೆ ಕರೆದುಕೊಂಡು ಹೋಗಿ ಆ ದಾವೆಯನ್ನು ತೆಗೆದುಕೊಂಡು ಅವರಿಗೆ ರಶೀದಿಯನ್ನು ಕೊಟ್ಟರು. ಆ ನಂತರದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಪತ್ರಿಕೆಗಳಲ್ಲಿ ಈ ವಿಚಾರ ಬಂದಿದೆ. ನೊಂದಂಥ ಶ್ರೀನಾಥ್‌ರವರು ಪೊಲೀಸ್ ಠಾಣೆಗಳಲ್ಲಿ ಮಾನವೀಯತೆಯ ದೃಷ್ಟಿಯಿಟ್ಟುಕೊಂಡು ನಡೆದುಕೊಳ್ಳದಿರುವಂಥ ವಿಚಾರವನ್ನು ನೋವಿನಿಂದ ಹೇಳಿದರು ಸದರಿ ಇನ್ಸ್‌ಪೆಕ್ಟರ್ ತನ್ನ ಟ್ರೈನಿಂಗ್ ಪೀರಿಯಡ್‌ನಲ್ಲಿ, ಪ್ರೊಬೇಷನರಿ ಪೀರಿಯಡ್‌ನಲ್ಲಿ ಇದ್ದಾಗಲೇ ಅವರು ನಡೆದುಕೊಂಡಂಥ ಅಮಾನವೀಯತೆಯ ಕೃತ್ಯದಿಂದ ಅವರನ್ನು ಸರ್ಕಾರ ಸಸ್ಪೆಂಡ್ ಮಾಡಿತ್ತು. ನಂತರ ಸಸ್ಪೆನ್‌ಷನ್‌ನ್ನು ರಿವೋಕ್ ಮಾಡಿ ಪುನಃ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಅನಂತರದಲ್ಲಿ ಕುವೆಂಪುನಗರದ ಪೊಲೀಸ್ ಸ್ಟೇಷನ್‌ನಲ್ಲಿಯೇ ಶಾಲೆಗೆ ಹೋಗುತ್ತಿದ್ದಂಥ 9ನೇ ತರಗತಿಯ ವಿನೂತ ಎನ್ನುವಂಥ ಹೆಸರಿನ ವಿದ್ಯಾರ್ಥಿನಿಯನ್ನು ಹೊಡೆದು ಅಮಾನುಷವಾಗಿ ವರ್ತಿಸಿದ್ದರಿಂದ ಅವಳು ಅಂಗವಿಕಲೆಯಾದಳು. ಆ ಸಂದರ್ಭದಲ್ಲಿ ಮೈಸೂರು ನಗರದಲ್ಲಿರುವಂಥ ಎಲ್ಲಾ ಸಂಘಸಂಸ್ಥೆಗಳು